ಶ್ರೀ ರಮೇಶ್ ಎಸ್. ಜಿಗಜಿಣಗಿ :- ಉಪಾಧ್ಯಕ್ಷರೇ, ಅಡಿಷನಲ್ ಚೀಫ್ ಸೆಕ್ರೆಟರಿಯವರು ಏನು ವರದಿಯನ್ನು ಒಪ್ಪಿಸುತ್ತಾರೆ ಆ ವರದಿ ಬಂದಮೇಲೆ ಬಹಳ ತ್ವರಿತಗತಿಯಿಂದ ಇದರ ಬಗ್ಗೆ ಇತ್ಯರ್ಥ ಮಾಡುತ್ತೇವೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ :- ಉಪಾಧ್ಯಕ್ಷರೇ, ವರದಿಯನ್ನು ತಕ್ಷಣ ತರಿಸಿಕೊಂಡು ಈ ಅಧಿವೇಶನ ಮುಗಿಯುವುದರೊಳಗೆ ಸರ್ಕಾರ ದಯಮಾಡಿ ಇದರ ಬಗ್ಗೆ ಆದೇಶವನ್ನು ಸರ್ಕಾರ ಮಾಡಬೇಕು, ಅವರ ಸ್ಥಿತಿಯನ್ನು ನೋಡುವುದಕ್ಕೆ ಆಗುತ್ತಿಲ್ಲ ಅಥವಾ ಸಧ್ಯಕ್ಕೆ ಒಂದು ಇನ್ನೂರು ರೂಪಾಯಿ, ಮುನ್ನೂರು ರೂಪಾಯಿ ಗಳನ್ನಾದರು ಜಾಸ್ತಿ ಮಾಡಿ.

ಶ್ರೀ ರಮೇಶ್ ಎಸ್. ಜಿಗಜಿಣಗಿ :- ಜಾಸ್ತಿ ಮಾಡುವುದು ಬೇಡ, ಇದರ ಬಗ್ಗೆ ಈ ಸದನ ಮುಗಿಯುವುದರೊಳಗೆ ನಾನು ನಿರ್ಣಯ ಮಾಡುತ್ತೇನೆ ಎಂದು ಹೇಳುವುದು ಕಷ್ಟವಾಗುತ್ತದೆ. ಆ ವರದಿ ಬರಲಿ, ಬೇಕಾದರೆ ಅಡಿಷನಲ್ ಚೀಫ್ ಸೆಕ್ರೇಟರಿಯವರಿಗೆ ಬೇಗನೆ ವರದಿಯನ್ನು ನೀಡುವಂತೆ ಸೂಚನೆಯನ್ನು ನೀಡೋಣ. ವರದಿ ಬಂದತಕ್ಷಣ ಸರ್ಕಾರವೂ ಕೂಡ ಅವರ ಬಗ್ಗೆ ಮಾಡುವುದಿಲ್ಲ ಎಂಬ ನಿಲುವು ಏನೂ ಇಲ್ಲ. ಹಿಂದಿನಿಂದಲೂ ಕೂಡ ನಾವು ಅವರ ಡೇಟನ್ನು ಎಕ್ಸ್‌ಟೆಂಡ್ ಮಾಡಿಕೊಂಡು ಬಂದಿದ್ದೇವೆ. ಬಹುಶಃ 3-10-96ಕ್ಕೆ ಪುನಃ ಇವರ ಅವಧಿ ಮುಗಿ ಯುತ್ತ ದೆ ಎಂದು ನಾನು ತಿಳಿದುಕೊಂಡಿದ್ದೇನೆ, ಎಷ್ಟು ಸಾಧ್ಯವೊ ಅಷ್ಟು ಬೇಗ ಇದರ ಬಗ್ಗೆ ನಾನು ಇತ್ಯರ್ಥ ಮಾಡಿಸುತ್ತೇನೆ.

ವಿಷಯ :- ಬೆಂಗಳೂರು ನಗರದ ಕೆಲವು ಚಲನಚಿತ್ರ ಮಂಡಳಿಗಳಲ್ಲಿ ಆಂಗ್ಲ ಭಾಷಾ ಚಲನ ಚಿತ್ರಗಳ ಪ್ರದರ್ಶನ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2 (1009)

ಶ್ರೀಮತಿ ಪ್ರಮೀಳಾ ನೇಸರ್ಗಿ :- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ಅಪೇರಾ, ಇಂಪೀರಿಯಲ್, ಪ್ರದೀಪ್, ಸಂಗಂ, ಹಿಮಾಲಯ, ಮೇನಕ, ವಿಜಯಲಕ್ಷ್ಮಿ ಇತ್ಯಾದಿ ಚಲನಚಿತ್ರ ಮಂದಿರಗಳಲ್ಲಿ ಆಂಗ್ಲ ಭಾಷೆ ಚಲನಚಿತ್ರಗಳು ಅವ್ಯಾಹತವಾಗಿ ಪ್ರದರ್ಶನಗೊಳ್ಳುತ್ತಿರುವ ವಿಚಾರವು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಸರ್ಕಾರ ಇಂತಹ ಚಲನಚಿತ್ರಗಳನ್ನು ತಡೆಗಟ್ಟಲು ಯಾವುದೇ ಕ್ರಮಕ್ಕೆಗೊಳ್ಳದಿರಲು ಕಾರಣಗಳೇನು;

ಇ) ಇಂತಹ ಚಲನಚಿತ್ರಗಳನ್ನು ಪ್ರದರ್ಶಿಸುವ ಚಲನಚಿತ್ರಮಂದಿರಗಳ ಮಾಲೀಕರುಗಳ ವಿರುದ್ಧ ಹಾಗೂ ಚಲನಚಿತ್ರ ಪ್ರದರ್ಶಕರ ವಿರುದ್ಧ ಕೂಡಲೇ ತೀವ್ರ ಕ್ರಮ ಸರ್ಕಾರ ಕೈಗೊಳ್ಳುವುದೇ?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):-

ಅ) ಚಲನಚಿತ್ರ ಮಂದಿರಗಳಲ್ಲಿ ಸೆನ್ಸಾರ್ ನಿಯಮಗಳಿಗೆ ಒಳಪಟ್ಟು ಯಾವುದೇ ಭಾಷೆಯ ಚಿತ್ರಪ್ರದರ್ಶನವನ್ನು ಮಾಡಬಹುದಾಗಿದೆ. ಆದ್ದರಿಂದ ಆಂಗ್ಲ ಭಾಷೆಯ ಚಿತ್ರಗಳನ್ನು ಅವ್ಯಾಹತವಾಗಿ ಪ್ರದರ್ಶಿಸಿದರೆ ಅದಕ್ಕೆ ಕಾನೂನಿನ ಅಡಚಣೆ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ :- ನಾನು ಏನು ಪ್ರಶ್ನೆಯನ್ನು ಕೇಳಿದ್ದೇನೆ, ತಾವು ಏನು ಉತ್ತರವನ್ನು ಕೊಟ್ಟಿದ್ದೀರಿ ಎಂಬುದನ್ನು ದಯವಿಟ್ಟು ನೋಡಬೇಕು. ಬೆಂಗಳೂರು ನಗರದ ಅಪೇರಾ, ಇಂಪೀರಿಯಲ್, ಪ್ರದೀಪ್, ಸಂಗಮ್, ಹಿಮಾಲಯ, ಮೇನಕಾ, ವಿಜಯಲಕ್ಷ್ಮಿ, ಇತ್ಯಾದಿ ಚಲನಚಿತ್ರಮಂದಿರಗಳಲ್ಲಿ ಆಂಗ್ಲ ಭಾಷಾ ಚಲನ ಚಿತ್ರಗಳು ಅವ್ಯಾಹತವಾಗಿ ಪ್ರದರ್ಶನಗೊಳ್ಳುತ್ತಿರುವ ವಿಚಾರವು ನಿಜವಲ್ಲವೇ? ಎಂದು ಕೇಳಿದ್ದಕ್ಕೆ ಉತ್ತರವನ್ನು ಕೊಡುತ್ತಾರೆ, ಚಲನಚಿತ್ರಮಂದಿರಗಳಲ್ಲಿ ಸೆನ್ಸಾರ್ ನಿಯಮಗಳಿಗೆ ಒಳಪಟ್ಟು ಯಾವುದೇ ಭಾಷೆಯ ಚಿತ್ರ ಪ್ರದರ್ಶನವನ್ನು ಮಾಡಬಹುದಾಗಿದೆ. ಆದ್ದರಿಂದ ಆಂಗ್ಲಭಾಷೆಯ ಚಿತ್ರಗಳನ್ನು ಅವ್ಯಾಹತವಾಗಿ ಪ್ರದರ್ಶಿಸಿದರೆ ಅದಕ್ಕೆ ಕಾನೂನಿನ ಅಡಚಣೆ ಇಲ್ಲ ಎಂದು. ಸನ್ಮಾನ್ಯ ಉಪಾಧ್ಯಕ್ಷರೇ, ಇನ್ನೊಂದು ಪ್ರಶ್ನೆಯಲ್ಲಿ ಇದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳುತ್ತೀರಾ ಅಥವಾ ಮಾಲೀಕರ ವಿರುದ್ಧ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳಿದರೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಉಪಾಧ್ಯಕ್ಷರೇ, ನನಗೆ ಬಹಳ ಆಶ್ಚರ್ಯವಾಗುತ್ತದೆ. ಸನ್ಮಾನ್ಯ ಸಚಿವರಿಗೆ ಪೋಲೀಸಿನವರು ಎಷ್ಟು ಕೇಸು ಹಾಕಿದ್ದಾರೆ ಎಂಬ ಮಾಹಿತಿಯನ್ನು ತಮಗೇನಾದರೂ ಕೊಟ್ಟಿದ್ದಾರಾ? ಅದನ್ನೇನಾದರೂ ತಾವು ನೋಡಿದ್ದೀರಾ ಎನ್ನುವುದನ್ನು ನಾನು ಇವೊತ್ತು ಕೇಳಬೇಕಾಗಿದೆ. ಈಗಾಗಲೇ ಎಷ್ಟು ಚಿತ್ರಗಳ ಮೇಲೆ ಪೋಲೀಸಿನವರು ಕಂಪ್ಲೇಟ್ ಹಾಕಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯಾ ಎಂದು ಕೇಳಬೇಕಾಗಿದೆ. 10-10-94 ರಲ್ಲಿ ಸಂಗಮ್ ಥಿಯೇಟರ್‌ನ ಮ್ಯಾನೇಜರ್‌ರವರನ್ನು ಬಂಧಿಸಿ ಆಶ್ಲೀಲ ಚಿತ್ರಗಳನ್ನು ಪ್ರದರ್ಶನ ಮಾಡುತ್ತಾರೆ ಎಂದು ಹೇಳಿ ದಾವೆ ಹಾಕಿದ್ದಾರೆ. 26-03-1996 ರಲ್ಲಿ ಗೋಪಾಲ ಬಡಾವಣೆಯಲ್ಲಿ ಇರತಕ್ಕಂಥ ಪದ್ಮಾ ಚಿತ್ರಮಂದಿರದ ಮೇಲೆ ಆಶ್ಲೀಲ ಚಿತ್ರಪ್ರದರ್ಶನ ನಡೆಯುತ್ತಿದೆ ಎಂದು ಹೇಳಿ ಧಿಡೀರ್ ಧಾಳಿಯಿಂದ ಆಶ್ಲೀಲ ಚಿತ್ರಗಳ ಸುರಳಿಗಳನ್ನು ಸೀಜ್ ಮಾಡಿದ್ದಾರೆ. 14-11-94 ರಲ್ಲಿ ಅಪೇರಾ, ವಿನಾಯಕ ಚಿತ್ರಮಂದಿರಗಳ ಮೇಲೆ ಪೋಲೀಸಿನವರು ಧಾಳಿ ಮಾಡಿ ಆಶ್ಲೀಲ ಚಿತ್ರಗಳ ಸುರಳಿಗಳನ್ನು ವಶಪಡಿಸಿಕೊಂಡಿದ್ದಾರೆ. ಮತ್ತೆ ಅದೇ ಮಹದೇವಪುರ ಗರುಡಾಚಾರ್ ಪಾಳ್ಯ, ವಿನಾಯಕ ಚಿತ್ರಮಂದಿರ ಇಲ್ಲಿ ಆಶ್ಲೀಲ ಚಿತ್ರಗಳನ್ನು ವಶಪಡಿಸಿಕೊಂಡು ಅವರ ಮೇಲೆ ಕ್ರಿಮಿನಲ್ ದಾವೆ ಮಾಡಿದ್ದಾರೆ. 16-11-95 ರಲ್ಲಿ ಮೂವಿಲ್ಯಾಂಡ್ ಚಿತ್ರಮಂದಿರದ ಮೇಲೆ ಧಾಳಿ ಮಾಡಿ ಸುರಳಿಗಳನ್ನು ವಶಪಡಿಸಿಕೊಂಡು ಮ್ಯಾನೇಜರನ್ನು ಬಂಧಿಸಿ ಕ್ರಿಮಿನಲ್ ದಾವೆ ಹೂಡಿದ್ದಾರೆ.

ನನಗೆ ಬಹಳ ಆಶ್ಚರ್ಯ ಆಗುತ್ತದೆ. ಡೆಪ್ಯೂಟಿ ಕಮಿಷನರ್‌ರವರು ಈ ರೀತಿಯ ಅಶ್ಲೀಲ ಚಲನಚಿತ್ರ ಪ್ರದರ್ಶನಗಳಿಗೆ ಹೇಗೆ ಲೈಸನ್ಸ್ ಕೊಡುತ್ತಿದ್ದಾರೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಸನ್ಮಾನ್ಯ ಉಪಾಧ್ಯಕ್ಷರೇ, ಬ್ಲೂ ಫಿಲಂಗಳನ್ನು ಚಿತ್ರಮಂದಿರ ಗಳಲ್ಲಿ ಬೇರೆ ಚಿತ್ರಗಳ ಜೊತೆಯಲ್ಲಿ ಸೇರಿಸಿ ಪ್ರದರ್ಶನ ಮಾಡುತ್ತಿರುವಂತದ್ದನ್ನೂ ಕೂಡ ಎಷ್ಟೊ ಸೀಜ್ ಮಾಡಲಾಗಿದೆ. ಆದರೆ ನೀವು ಹೇಳುತ್ತೀರಿ, ಉದ್ಭವಿಸುವುದಿಲ್ಲ, ಈ ರೀತಿ ಮಾಡುವುದಿಲ್ಲ ಎಂಬ ಉತ್ತರವನ್ನು ಕೊಟ್ಟಿದ್ದೀರಿ. ನನಗೆ ಬಹಳ ಆಶ್ಚರ್ಯ ಆಗುತ್ತದೆ ಅದೇನು ತಮಗೆ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೊ ಅಥವಾ ಬೇಕು ಎಂದು ಈ ರೀತಿ ಕೊಟ್ಟಿದ್ದಾರೊ ಇದರ ಬಗ್ಗೆ ನಾವು ಇವೊತ್ತು ಯೋಚನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಲೋಕಾಯುಕ್ತವು ಕೂಡ ಕ್ರಮವನ್ನು ತೆಗೆದುಕೊಳ್ಳುತ್ತಾ ಇಲ್ಲ, ಡೆಪ್ಯೂಟಿ ಕಮಿಷನರ್‌ರವರು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೇ, ಇದು ಶಾರ್ಟ್ ನೋಟೀಸ್ ಕೊಶ್ಚನ್ನೊ ಅಥವಾ ಚರ್ಚೆಯೊ, ಶಾರ್ಟ್ ನೋಟೀಸ್ ಕೊಶ್ಚನ್ ಅಂದರೆ ಟೈಂ ಕಡಿಮೆ ಇರುತ್ತದೆ.

ಶ್ರೀ ಬಿ. ಮುನಿಯಪ್ಪ :- ಮಾನ್ಯ ಉಪಾಧ್ಯಕ್ಷರೇ, ಈ ವಿಚಾರದ ಬಗ್ಗೆ ಸ್ವಲ್ಪ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಸಮಾಜಕ್ಕೆ ಬಹಳ ಉಪಯೋಗ ಆಗುತ್ತದೆ. ನಾವು ಎಷ್ಟೋ ವಿಚಾರಗಳನ್ನು ಚರ್ಚೆ ಮಾಡಿದ್ದೇವೆ, ಈ ವಿಚಾರವನ್ನೂ ಕೂಡ ಚರ್ಚೆ ಮಾಡೋಣ. ಒಂದು ಅರ್ಧ ಗಂಟೆ ಅವಕಾಶ ಕೊಡಿ.

ಶ್ರೀಮತಿ ಹೂಮೀಳಾ ನೇಸರ್ಗಿ :- ಇದರ ಬಗ್ಗೆ ಅರ್ಧಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು. ಏಕೆಂದರೆ ಇದು ಬಹಳ ಅವ್ಯಾಹತವಾಗಿ ನಡೆಯುತ್ತಿರುವುದರಿಂದ...

ಉಪಾಧ್ಯಕ್ಷರು :- ಇವೊತ್ತು ಆಗುವುದಿಲ್ಲ, ಈ ಬಗ್ಗೆ ಮತ್ತೊಮ್ಮೆ ಅವಕಾಶವನ್ನು ಕೊಡೋಣ. ಈಗ ಲಿಖಿತ ಮೂಲಕ ಉತ್ತರಿಸಲಾಗುವ ಪ್ರಶ್ನೆಗಳು.

ಶ್ರೀ ವಾಟಾಳ್ ನಾಗರಾಜ್ :- ಈಗ ಮೊದಲು ಈ ಪ್ರಶ್ನೆಗೆ ಉತ್ತರವನ್ನು ಕೊಟ್ಟು ಬಿಡಲಿ, ಆಮೇಲೆ ನಾವು ಅರ್ಧಗಂಟೆ ಚರ್ಚೆ ಮಾಡೋಣ. ಇದು ಬಹಳ ಪ್ರಮುಖವಾದ ಪ್ರಶ್ನೆಯನ್ನು ಕೇಳಿದ್ದಾರೆ ಉತ್ತರವನ್ನು ಕೊಡಲಿ.

ಉಪಾಧ್ಯಕ್ಷರು :- ತಾವು ಹೇಳಿವುದನ್ನು ಮುಗಿಸಿ, ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀಮತಿ ಹೂಮೀಳಾ ನೇಸರ್ಗಿ :- ಉಪಾಧ್ಯಕ್ಷರೇ, ಈ ರೀತಿಯ ಕ್ರಮವನ್ನು ತೆಗೆದುಕೊಂಡಿರುವುದು ನಿಜವೇ? ಅವರ ಮೇಲೆ ದಾವೆಯನ್ನು ಹಾಕಿರುವುದು ನಿಜವೇ? ಲೋಕಾಯುಕ್ತಕ್ಕೆ ಡೆಪ್ಯೂಟಿ ಕಮಿಷನ್‌ರವರು ಇದರಲ್ಲಿ ಶಾಮೀಲಾಗಿದ್ದಾರೆ ಎಂದು

ಹೇಳಿ ಲೈಸನ್ಸ್ ಕೊಡುತ್ತಾ ಇರುವುದು ತಪ್ಪು, ಅವರ ಮೇಲೆ ಕ್ರಮ ತೆಗೆದು ಕೊಳ್ಳಬೇಕೆಂದು ಹೇಳಿ ಕಂಪ್ಲೆಂಟ್ ಹೋಗಿರುವುದು ನಿಜವೇ? ತಮ್ಮಲ್ಲಿ ಮಾಹಿತಿ ಇದ್ದರೆ ಹೇಳಿ. ಈ ರೀತಿ ಕೇಸುಗಳು ಬಹಳ ಇದೆ.

ಶ್ರೀ ಆರ್. ರೋಷನ್ ಬೇಗ್ :- ಮಾನ್ಯ ಉಪಾಧ್ಯಕ್ಷರೇ, ಸದಸ್ಯರಾದ ಶ್ರೀಮತಿ ಪ್ರಮೀಳಾರವರು ಪ್ರಶ್ನೆಯನ್ನೇನು ಎತ್ತಿದ್ದಾರೆ, ಆ ಪ್ರಶ್ನೆಯ ಬಗ್ಗೆ ಏನಾಗಿದೆ ಯೆಂದರೆ, ಇವರು ಪ್ರಶ್ನೆಯನ್ನು ಕೇಳಿರುವುದು ಏನು? ಇಂಗ್ಲೀಷ್ ಚಲನಚಿತ್ರಗಳು ಇಂತಹ ಥಿಯೇಟರ್‌ಗಳಲ್ಲಿ ನಡೆಯುತ್ತಿರುವುದು ನಿಜವೇ? ಎಂದು. ಇದನ್ನು ನಾನು ಅರ್ಥಮಾಡಿಕೊಂಡ ಹಾಗೆ ಬಹಳ ಮುಖ್ಯವಾದ ಪ್ರಶ್ನೆಯನ್ನು ಇವರು ಕೇಳುತ್ತಿದ್ದಾರೆ. ಏನೆಂದರೆ ಬೆಂಗಳೂರು ನಗರದ ಸಿನಿಮಾ ಮಂದಿರಗಳಲ್ಲಿ ಸೆನ್ಸಾರ್ ಆಗದಿರುವ ಚಿತ್ರಗಳನ್ನು ತೋರಿಸುತ್ತಾರೆ. ಮತ್ತು ಸೆನ್ಸಾರ್ ಸರ್ಟಿಫಿಕೇಟ್ ಇದ್ದರೂ ಅದರಲ್ಲಿ ಬೇರೆ ಬ್ಲೂ ಫಿಲ್ಮ್ ದೃಶ್ಯಗಳನ್ನು ಸೇರಿಸಿಕೊಂಡು ತೋರಿಸುತ್ತಾರೆ ಎಂಬುದು ಅವರ ಪ್ರಶ್ನೆ. ಆಮೇಲೆ ಮಾನ್ಯ ವಾಟಾಳ್ ನಾಗರಾಜ್‌ರವರು, ಹಿರಿಯ ಸದಸ್ಯರುಗಳೆಲ್ಲ ಪ್ರಶ್ನೆಯನ್ನು ಕೇಳಿದ್ದಾರೆ. ಅರ್ಧಗಂಟೆ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟರೆ ನಾನು ಇದರ ಬಗ್ಗೆ ಪೂರ್ಣಮಾಹಿತಿಯನ್ನು ಒದಗಿಸಿಕೊಡುತ್ತೇನೆ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ :- ಅವರು ವಿವರಗಳಿಗೆ ಬೇಕಾದರೆ ಟೈಮ್ ತೆಗೆದುಕೊಳ್ಳಲಿ, ಇಂತಹ ದಿವಸವೆಂದು ಚರ್ಚೆಗೆ ನಿಗದಿ ಮಾಡಲಿ, ಇಲ್ಲದಿದ್ದರೆ ಈಗಲೇ ಅರ್ಧಗಂಟೆಯ ಅವಕಾಶವನ್ನು ಕೊಟ್ಟರೆ ನಾವೆಲ್ಲರೂ ಮಾತನಾಡುವುದಕ್ಕೆ ತಯಾರಿದ್ದೇವೆ. ಇದು ಬಹಳ ಪ್ರಮುಖವಾದಂತಹ ವಿಚಾರವಾಗಿದೆ.

ಉಪಾಧ್ಯಕ್ಷರು :- ಇವತ್ತು ಬೇಡ, ಮತ್ತೊಂದು ದಿವಸ ಟೈಮ್ ನಿಗದಿ ಮಾಡೋಣ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೇ, ಅರ್ಧ ಗಂಟೆ ಚರ್ಚೆಗೆ ಹಾಕಿದ ಮೇಲೆ ಮುಂದಿನ ವಿಷಯವನ್ನು ತೆಗೆದುಕೊಳ್ಳಿ.

ಉಪಾಧ್ಯಕ್ಷರು :- ಈ ವಿಷಯವನ್ನು ಮಂಗಳವಾರ ತೆಗೆದುಕೊಳ್ಳೋಣ. ಮುಂದಿನ ವಿಷಯವನ್ನು ಈಗ ತೆಗೆದುಕೊಳ್ಳೋಣ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಮಾನ್ಯ ಗೋವಿಂದೇಗೌಡರು ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ....

ಉಪಾಧ್ಯಕ್ಷರು :- ಹೀಗೆ ನಾಲ್ಕೈದು ಜನರು ಒಟ್ಟಿಗೆ ಎದ್ದು ನಿಂತು ಹೇಗೆ ಸದನವನ್ನು ನಡೆಸುವುದು? ಇಲ್ಲಿ ಅವರು ಕೇಳುತ್ತಾರೆ, ಇವರು ಕೇಳುತ್ತಾರೆ, ಈ ರೀತಿಯಾದರೆ ಸದನವನ್ನು ಯಾವ ರೀತಿ ನಡೆಸುವುದು? ಮಾನ್ಯ ವಾಟಾಳ್ ನಾಗರಾಜ್ ರವರು ಕೇಳುತ್ತಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಉಪಾಧ್ಯಕ್ಷರೇ, ಒಂದು ಕ್ಲಾರಿಫಿಕೇಷನ್ ಏನು ಕೇಳುವುದೆಂದರೆ, ಬೆಂಗಳೂರು ನಗರದಲ್ಲಿ ಕೆಲವು ಚಿತ್ರಮಂದಿರದಲ್ಲಿ ಅಶ್ಲೀಲ ಚಿತ್ರಗಳನ್ನು ಪ್ರದರ್ಶಿಸುವ ಬಗ್ಗೆ ಎಂದು ಹೆಡ್ಡಿಂಗ್ ಇದೆ.

ಉಪಾಧ್ಯಕ್ಷರು :- ಈಗಾಗಲೇ ಇದಕ್ಕೆ ಅರ್ಧ ಗಂಟೆಯ ಕಾಲಾವಧಿಯನ್ನು ನಿಗದಿ ಮಾಡುತ್ತೇವೆಂದು ಹೇಳಿದ ಮೇಲೂ ತಾವು ಏಕೆ ಚರ್ಚೆ ಮಾಡುತ್ತೀರಿ? ಹೀಗೆ ಚರ್ಚೆ ಮಾಡುವುದು ಅನಾವಶ್ಯಕ.

ಶ್ರೀ ಎಸ್. ಸುರೇಶ್ ಕುಮಾರ್ :- ನನ್ನ ಪ್ರಶ್ನೆ ಇರುವುದು All English films are obscene. ಇದು ಪ್ರಶ್ನೆಯಲ್ಲಿದೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೇ, ತಾವು ಅರ್ಧ ಗಂಟೆಯ ಚರ್ಚೆಗೆ ಅವಕಾಶವನ್ನು ಕೊಟ್ಟಿರುವಂಥಾದ್ದು ನಾನು ಒಪ್ಪುತ್ತೇನೆ. ಅದರ ಬಗ್ಗೆ ನನ್ನ ತಕರಾರು ಇಲ್ಲ. ಆದರೆ ಇದು ಒಂದು ದೊಡ್ಡ ಪಿಡುಗು ಆಗಿದೆ. ಇದು ಬರೀ ಬೆಂಗಳೂರು ನಗರದಲ್ಲಿ ಅಷ್ಟೇ ಅಲ್ಲ, ಕರ್ನಾಟಕ ರಾಜ್ಯದ ಪ್ರತಿ ಹಳ್ಳಿ ಹಳ್ಳಿಗಳಲ್ಲೂ ಇಂತಹ ಕೆಟ್ಟ ಚಿತ್ರಗಳು ಪರಂಪರೆಯಾಗಿ ಹೋಗುತ್ತಾ ಇದೆ. ಇದನ್ನು ತಡೆಹಿಡಿಯುವ ಬಗ್ಗೆ ಸಮಗ್ರವಾದಂತಹ ಚರ್ಚೆಗೆ ತಾವು ಅವಕಾಶ ಕೊಟ್ಟಿದ್ದೀರಿ. ಆದರೆ ನನಗೆ ಏನು ಎಂದರೆ ಇಲ್ಲಿ ಪ್ರಶ್ನೆ ಬಂದಿರುವಂಥಾದ್ದು ಬಹಳ ಪ್ರಮುಖ ವಾಂದತಹ ಕೆಲವು ವಿಚಾರಗಳನ್ನು ಮಾನ್ಯ ಮಂತ್ರಿಯವರು ಸಂಗ್ರಹ ಮಾಡಿದ್ದಾರೆ. ಯಾವ್ಯಾವ ಚಿತ್ರಮಂದಿರಗಳಲ್ಲಿ ಅಶ್ಲೀಲ ಚಿತ್ರಗಳು ಬರುತ್ತವೆ.

(ಗೊಂದಲ)

ಶ್ರೀ ವಾಟಳ್ ನಾಗರಾಜ್ :- ಇಂಗ್ಲೀಷ್ ಚಿತ್ರಗಳಲ್ಲಿರುವಂತಹ ಅಶ್ಲೀಲತೆ ಆಗಬಹುದೇ? ಅದು ಇಲ್ಲವೇ?

ಉಪಾಧ್ಯಕ್ಷರು :- ತಾವು ಕೇಳಿರುವಂಥಾದ್ದು ಇಲ್ಲ. ಈಗ ಏಕೆ ಚರ್ಚೆ ಮಾಡುತ್ತೀರಿ? ಇದಕ್ಕೆ ಅರ್ಧ ಗಂಟೆ ಕಾಲಾವಕಾಶವನ್ನು ಕೊಟ್ಟಿದ್ದೇವೆ. ಈಗ ವಾಟಾಳ್ ನಾಗರಾಜ್‌ರವರೆ ತಾವು ಕನ್ನಡದ ಬಗ್ಗೆ ಸಾಕಷ್ಟು ಮಾತನಾಡಿದ್ದೀರಿ, ಈಗ ಇಂಗ್ಲೀಷ್ ಬಗ್ಗೆ ತಾವು ಏಕೆ ಚಿಂತೆ ಮಾಡುತ್ತೀರಿ? ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :- ನೀವು ಬಹಳ ಬುದ್ಧಿವಂತರು, ಅದನ್ನು ನಾನು ಒಪ್ಪುತ್ತೇನೆ. ಬೆಂಗಳೂರು ನಗರದ ಕೆಲವು ಚಿತ್ರಮಂದಿರಗಳಲ್ಲಿ ಅಶ್ಲೀಲ ಚಿತ್ರಗಳನ್ನು ಪ್ರದರ್ಶಿಸುವ ಬಗ್ಗೆ...

ಉಪಾಧ್ಯಕ್ಷರು :- ತಾವು ಹೇಳುವಂತಹ ರೀತಿಯಲ್ಲಿ ಇಲ್ಲ. ತಾವು ಕುಳಿತುಕೊಳ್ಳಿ.

(ಗೊಂದಲ)

2) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ದಿನಾಂಕ 26 ನೇ ಜುಲೈ 1996 ರ 16ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವಂಥ 69 ಪ್ರಶ್ನಗಳ ಪೈಕಿ 60 ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ :- ಧಾರವಾಡ ಜಿಲ್ಲೆಯ ಬರ ಪರಿಹಾರ ಸಮಿತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 846 (1426)

ಶ್ರೀ ಅಶೋಕ್ ಎಸ್. ಕಾಟವೆ (ಹುಬ್ಬಳ್ಳಿ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) 1995-96 ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯ ತಾಲ್ಲೂಕುವಾರು ಬರ ಪರಿಹಾರ ಸಮಿತಿಯಿಂದ ಎಷ್ಟು ಪ್ರಸ್ತಾವನೆಗಳು ಬಂದಿವೆ?

(ಆ) ಇವುಗಳಿಗೆ ಮಂಜೂರಾದ ಹಣವೆಷ್ಟು? ಬಿಡುಗಡೆಯಾಗಿ ಕಾರ್ಯಗತವಾದ ಹಣ ಎಷ್ಟು? (ಸಮಗ್ರ ವಿವರಣೆ ನೀಡುವುದು)

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :-

ಅ) 1995-96 ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಬರ ಪರಿಹಾರ ಸಮಿತಿಯಿಂದ - 556 ಪ್ರಸ್ತಾವನೆಗಳು ಬಂದಿರುತ್ತವೆ. (ತಾಲ್ಲೂಕುವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ)

ಆ) ಸರ್ಕಾರವು ರೂ. 190.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಈ ಪೈಕಿ ಜಿಲ್ಲಾಧಿಕಾರಿಗಳು ಅನುಷ್ಠಾನಾಧಿಕಾರಿಗಳಿಗೆ ರೂ. 180.92 ಲಕ್ಷಗಳನ್ನು ಮರು ಹಂಚಿಕೆ ಮಾಡಿದ್ದಾರೆ.

ಕಾಮಗಾರಿಗಳಿಗೆ ರೂ. 60.513ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. (ತಾಲ್ಲೂಕು ವಾರು ವಿವರಗಳನ್ನು ಅನುಬಂಧ -2 ರಲ್ಲಿ ಒದಿಗಿಸಿದೆ).